# ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒ0ದು ಉದ್ಯಮ)

ನೋ0ದಾಯಿತ ಕಛೇರಿ: ಲೋಕೋಪಯೋಗಿ ಕಛೇರಿ ಪೂರಕ ಕಟ್ಟಡ, 3ನೇ ಮಹಡಿ, ಕೆ. ಆರ್. ಸರ್ಕಲ್, ಬೆ0ಗಳೂರು – 560001

ಸಿಐಎನ್: L85320KA1994SGC016101, ಮಿಂಚಂಚೆ: edp@kbjnl.ಛಿಂಟ ದೂರವಾಣಿ: 22244484 22277488, 22277393.

ಟೆಲಿಫ್ಯಾಕ್ಸ್: 080–22219470


## 30.09.2017 ರಲ್ಲಿದ್ದಂತೆ ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಗತಿಯ ವರದಿ

| ಘಟಕಗಳು / ಯೋಜಿತ | 30.09.2017 ರಲ್ಲಿದ್ದಂತೆ ಪ್ರಗತಿ* |
|---|---|
| **1) ಕೃಮೇಯೋ ಹಂತ–1 ಮತ್ತು 2**<br><br>**ನೀರಾವರಿ ಪ್ರದೇಶ – 6,22,023 ಹೆಕ್ಟೇರ್** | ಆಲಮಟ್ಟಿ ಎಡದಂಡೆ ಕಾಲುವೆ ಕಿ.ಮೀ.72 ಬಾಕಿ ಉಳಿದ ಕಾಮಗಾರಿ ಸೇರಿದಂತೆ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದೆ.<br><br>**6,18,932 ಹೆಕ್ಟೇರ್** |
| **2) ಕೃಮೇಯೋ ಹಂತ–3**<br><br>**ನೀರಾವರಿ ಪ್ರದೇಶ – 5,30,000 ಹೆಕ್ಟೇರ್** | ಯೋಜಿತ 5.3 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಉತ್ತರ ಕರ್ನಾಟಕದ ಕಲಬುರ್ಗಿ, ಯಾದಗಿರಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ ಈ ಕೆಳಕಂಡ ಉಪಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:<br><br>(1) ಮುಳವಾಡ ಏತ ನೀರಾವರಿ ಯೋಜನೆ ಹಂತ–3, (2) ಚಿಮ್ಮಲಗಿ ಏತ ನೀರಾವರಿ ಯೋಜನೆ (3) ಇಂಡಿ ಏತ ನೀರಾವರಿ ಯೋಜನೆ (ಗುತ್ತಿಬಸವಣ್ಣ)–ವಿಸ್ತರಣಾ, (4) ಮಲ್ಲಾಬಾದ ಏತ ನೀರಾವರಿ ಯೋಜನೆ, (5) ರಾಂಪೂರ ಏತ ನೀರಾವರಿ ಯೋಜನೆ, (6) ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ, (7) ಕೊಪ್ಪಳ ಏತ ನೀರಾವರಿ ಯೋಜನೆ, (8) ಹೆರಕಲ್ ಏತ ನೀರಾವರಿ ಯೋಜನೆ ಮತ್ತು (9) ಭೀಮಾ ಫ್ಲಾಂಕ್.<br><br>ಭೂಸ್ವಾಧೀನ (ಜಲಾವೃತ ಪ್ರದೇಶ, ಪುನರ್ವಸತಿ ಕೇಂದ್ರಗಳು ಮತ್ತು ಕಾಲುವೆ ಜಾಲ), ಪುನರ್ವಸತಿ & ಪುನರ್ನಿರ್ಮಾಣ ಮತ್ತು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳನ್ನೊಳಗೊಂಡಂತೆ ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿವೆ. |
| **3) ಕೃಷ್ಣಾ ಜಲಾನಯನದಲ್ಲಿ ಇತರೆ ಯೋಜನೆಗಳು** | |
| **ಎ) ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ** | ಈ ಏತ ನೀರಾವರಿ ಯೋಜನೆಯಡಿ 5.84 ಟಿಎಂಸಿ ನೀರನ್ನು ಬಳಸಿಕೊಂಡು ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 26,200 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಹಮ್ಮಿಕೊಳ್ಳಲಾಗಿದೆ. ಮರೋಳ ಗ್ರಾಮದ ಸಮೀಪ ನಾರಾಯಣಪೂರ ಜಲಾಶಯದ ಹಿನ್ನೀರಿನಲ್ಲಿ ಕೈಗೊಂಡ ಮೊದಲನೇ ಮುಖ್ಯ ಸ್ಥಾವರ ಪೂರ್ಣಗೊಂಡಿದೆ.<br><br>**ಪಶ್ಚಿಮ ಮುಖ್ಯ ಕಾಲುವೆಯ ಮೊದಲ ಹಂತ** – ವಿತರಣಾ ಕಾಲವೆ ಸಂ.1 ರಿಂದ 25 ಒಳಗೊಂಡಂತೆ ಕಿ.ಮೀ. 0.00 ರಿಂದ 62.00 ರವರೆಗೆ ಕಾಮಗಾರಿಗಳು ಪೂರ್ಣಗೊಂಡಿವೆ.<br><br>**ಪೂರ್ವ ಮುಖ್ಯ ಕಾಲುವೆಯ ಮೊದಲ ಹಂತ** – ವಿತರಣಾ ಕಾಲುವೆ ಸಂ. 1 ರಿಂದ 20 ಒಳಗೊಂಡಂತೆ ಕಿ.ಮೀ.0.00 ರಿಂದ 52.00 ರವರೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ನೀರನ್ನು ನೀರಾವರಿಗಾಗಿ ಹರಿಸಲಾಗಿದೆ.<br><br>**ಎರಡನೇ ಹಂತ** – ರಾಮವಡಗಿ ಸಮೀಪ ಮುಖ್ಯ ಸ್ಥಾವರದ ಕಾಮಗಾರಿಗಳು ಪೂರ್ಣಗೊಂಡಿವೆ. |

| | |
|---|---|
| | ರಾಮಥಾಳ(ಮರೋಳ) ಯೋಜನೆಯ 2ನೇ ಹಂತದಡಿ ಗುರುತ್ವಾಕರ್ಷಣೆ ಆಧಾರಿತ ಸೂಕ್ಷ್ಮ ನೀರಾವರಿ (ಹನಿ ನೀರಾವರಿ) ಪದ್ಧತಿ ಅಳವಡಿಸಿ 24,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಪ್ರಾಯೋಗಿಕ ಆಧಾರದ (2011-12ರ ದರ ಪಟ್ಟಿಯಂತೆ) ರೂ.786.11 ಕೋಟಿಗಳ ಅಂದಾಜು ಮೊತ್ತದ ಹಾಗೂ 3 ವರ್ಷಗಳ ಪಾಲನೆ ಮತ್ತು ಪೋಷಣೆಯೊನ್ನೊಳಗೊಂಡ ಕಾರ್ಯಯೋಜನೆಗೆ ಸರ್ಕಾರವು ದಿನಾಂಕ:16.06.2012ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.<br><br>ರಾಮಥಾಳ(ಮರೋಳ) ಏತ ನೀರಾವರಿ ಯೋಜನೆ ಎರಡನೇ ಹಂತದಡಿ 24,000 ಹೆಕ್ಟೇರ್ ಜಲಾನಯನ ಪ್ರದೇಶಕ್ಕೆ ಹನಿ ನೀರಾವರಿ ಪದ್ಧತಿ ಅಳವಡಿಕೆಯ ಟರ್ನ್ ಕೀ ಆಧಾರದ ಮೇಲೆ 2 ಪ್ಯಾಕೇಜಗಳಲ್ಲಿ ವಹಿಸಲಾದ ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು 2017ರ ಮುಂಗಾರು ಹಂಗಾಮಿನಡಿ ನೀರಾವರಿ ಸೌಕರ್ಯ ಒದಗಿಸಲಾಗುತ್ತಿದೆ.<br><br>**34,493 ಹೆಕ್ಟೇರ್** |
| **ನೀರಾವರಿ ಪ್ರದೇಶ -- 36,000 ಹೆಕ್ಟೇರ್** | |
| **ಬಿ) ತೆಗ್ಗಿ – ಸಿದ್ದಾಪುರ ಏತ ನೀರಾವರಿ ಯೋಜನೆ**<br><br>**ನೀರಾವರಿ ಪ್ರದೇಶ -- 3,000 ಹೆಕ್ಟೇರ್** | ಈ ಯೋಜನೆಯಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ದೊರೆಯುವ 0.90 ಟಿಎಂಸಿ ನೀರಿನ ಉಪಯುಕ್ತ ಬಳಕೆಯಿಂದ ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ 3,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.<br><br>ಈ ಯೋಜನೆಯು ಪೂರ್ಣಗೊಂಡಿದ್ದು, ಕಾರ್ಯಗತಗೊಳಿಸಲಾಗಿದೆ.<br><br>**3,000 ಹೆಕ್ಟೇರ್** |
| **ಸಿ) ತಿಮ್ಮಾಪುರ ಏತ ನೀರಾವರಿ ಯೋಜನೆ**<br>(ಆಲಮಟ್ಟಿ ಬಲದಂಡೆ ಕಾಲುವೆ ಹಂತ-2) | ಈ ಏತ ನೀರಾವರಿ ಯೋಜನೆಯು ಆಲಮಟ್ಟಿ ಬಲದಂಡೆ ಕಾಲುವೆ ಕಿ.ಮೀ.5.40 ರಿಂದ ಆರಂಭಗೊಳ್ಳುತ್ತದೆ. ಈ ಯೋಜನೆಯಡಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ 20,100 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸಲಾಗುವುದು. ಟರ್ನ್‌ಕೀ ಆಧಾರದ ಮೇಲೆ ವಹಿಸಲಾದ ಮುಖ್ಯ ಸ್ಥಾವರದ ಕಾಮಗಾರಿಗಳು ಪೂರ್ಣಗೊಂಡಿದ್ದು, ಯೋಜನೆ ಕಾರ್ಯಗತಗೊಳಿಸಲಾಗಿದೆ.<br><br>**ವಿತರಣಾ ಕೊಠಡಿ-1**:<br><br>1) ಮುಖ್ಯ ಕಾಲುವೆ ಕಿ.ಮೀ. 0.00 ರಿಂದ 43.00 ಮತ್ತು ವಿತರಣಾ ಕೊಠಡಿ-1 ರಡಿಯಲ್ಲಿ ಬರುವ ಡಿಸ್ಟ್ರಿಬ್ಯೂಟರಿ ಸಂಖ್ಯೆ: 1 ರಿಂದ 23 ರವರೆಗೆ ಕಾಮಗಾರಿ ಪೂರ್ಣಗೊಂಡಿದೆ.<br><br>2) ಮುಖ್ಯ ಕಾಲುವೆ ಕಿ.ಮೀ. 43.00 ರಿಂದ 53.00 ರವರೆಗೆ ಬೆನಕಟ್ಟಿ ಗ್ರಾಮದ ಜನರಿಂದ ಗ್ರಾಮ ಸಭೆ ಠರಾವು ಹೊರಡಿಸಿ ಅಡ್ಡಿಪಡಿಸಿದ ಕಾರಣ ಮುಖ್ಯ ಕಾಲುವೆಯ ಬಾಕಿ ಉಳಿದ ಕಿ.ಮೀ. 46.70 ರಿಂದ 53.00 ರವರೆಗಿನ ನಿರ್ಮಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ.<br><br>**ವಿತರಣಾ ಕೊಠಡಿ-2** :<br><br>1) ಮುಖ್ಯ ಕಾಲುವೆ ಕಿ.ಮೀ.0.00 ರಿಂದ 28.00 ಮತ್ತು ಡಿಸ್ಟ್ರಿಬ್ಯೂಟರಿ ಸಂಖ್ಯೆ. 1 ರಿಂದ 10 ರವರೆಗಿನ ಕಾಮಗಾರಿಗಳು ಪೂರ್ಣಗೊಂಡಿವೆ. |

| | |
|---|---|
| <br><br><br><br><br>ನೀರಾವರಿ ಪ್ರದೇಶ -- 20,100 ಹೆಕ್ಟೇರ್ | 2) ಬೆನಕಟ್ಟಿ ಗ್ರಾಮದ ಜನರಿಂದ ಗ್ರಾಮ ಸಭೆ ಠರಾವು ಹೊರಡಿಸಿ ಅಡ್ಡಿಪಡಿಸಿದ ಕಾರಣ ನಿರ್ಮಾಣ ಕಾಮಗಾರಿಗಯನ್ನು ಮುಖ್ಯ ಕಾಲುವೆ ಕಿ.ಮೀ. 28.00ಕ್ಕೆ ಸೀಮಿತಗೊಳಿಸಲಾಗಿದೆ. ಉಳಿದ ಸಾಮರ್ಥ್ಯ ಸೃಷ್ಟಿಸುವ ಸಲುವಾಗಿ ವಿತರಣಾ ಕಾಲುವೆ ಸಂಖ್ಯೆ.2ರಡಿ ಡಿಸ್ಟ್ರಿಬ್ಯೂಟರಿ ಸಂಖ್ಯೆ.11ರ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು ಮುಕ್ತಾಯದ ಹಂತದಲ್ಲಿದೆ.<br><br>**17,482 ಹೆಕ್ಟೇರ್** |
| **ಡಿ) ಸೊನ್ನ ಏತ ನೀರಾವರಿ ಯೋಜನೆ**<br><br><br><br><br><br>ನೀರಾವರಿ ಪ್ರದೇಶ -- 1,050 ಹೆಕ್ಟೇರ್ | ಈ ಏತ ನೀರಾವರಿ ಯೋಜನೆಗಳಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ದೊರೆಯುವ 0.27 ಟಿಎಂಸಿ ನೀರಿನ ಉಪಯುಕ್ತ ಬಳಕೆಯಿಂದ ಬೀಳಗಿ ತಾಲ್ಲೂಕಿನ 1,055 ಹೆಕ್ಟೇರ್ ಜಲಾನಯನ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.<br><br>ಈ ಯೋಜನೆಯು ಪೂರ್ಣಗೊಂಡಿದ್ದು ಕಾರ್ಯಗತಗೊಳಿಸಲಾಗಿದೆ.<br><br>**950 ಹೆಕ್ಟೇರ್** |
| **ಇ) ರೊಳ್ಳಿ ಮತ್ತು ಮನ್ನಿಕೇರಿ ಏತ ನೀರಾವರಿ ಯೋಜನೆ**<br><br><br><br><br><br><br><br><br>ನೀರಾವರಿ ಪ್ರದೇಶ -- 2,450 ಹೆಕ್ಟೇರ್ | ಈ ಏತ ನೀರಾವರಿ ಯೋಜನೆಯಡಿ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ 0.73 ಟಿಎಂಸಿ ನೀರನ್ನು ಬಳಸಿ ಬೀಳಗಿ ತಾಲೂಕಿನ 2,350 ಹೆಕ್ಟೇರ್ ಜಲಾನಯನ ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗುವುದು.<br><br>ಯೋಜನೆಯ ಮುಖ್ಯ ಸ್ಥಾವರ ಮತ್ತು ವಿತರಣಾ ಕೊಠಡಿ ಸಂಖ್ಯೆ: 1 ಮತ್ತು 3 ರಡಿಯಲ್ಲಿ ಬರುವ ಕಾಲುವೆ ಜಾಲದ ಕೆಲಸಗಳು ಪೂರ್ಣಗೊಂಡಿದೆ. ವಿತರಣಾ ಕೊಠಡಿ ಸಂಖ್ಯೆ: 2 ರಡಿಯಲ್ಲಿ ಬರುವ ಕಾಲುವೆ ಜಾಲದ ಬಾಕಿ ಉಳಿದ ಕಾಮಗಾರಿ ಬಹುತೇಕ ಮುಕ್ತಾಯ ಹಂತದಲ್ಲಿದ್ದು, ಪೂರ್ಣಗೊಂಡ ಕಾಲುವೆ ಜಾಲಗಳಲ್ಲಿ ನೀರಾವರಿಗಾಗಿ ನೀರನ್ನು ಹರಿಸಲಾಗಿದೆ.<br><br>**2,350 ಹೆಕ್ಟೇರ್** |
| **4.ಭೀಮಾ ನದಿಯ ಮೇಲಿನ ಬ್ಯಾರೇಜುಗಳು** | |
| **ಎ)1) ಘತ್ತರಗಾ ಬ್ಯಾರೇಜು 2) ಕಲ್ಲೂರ 'ಬ' ಬ್ಯಾರೇಜು 3) ಯಾದ್‌ಗೀರ್ ಬ್ಯಾರೇಜು 4) ಜೋಳದಡಗಿ-ಗೂಡೂರು ಬ್ಯಾರೇಜು** | ಈ ಬ್ಯಾರೇಜುಗಳ ಕೆಲಸಗಳು ಪೂರ್ಣಗೊಂಡಿದ್ದು, ರೈತರು ತಮ್ಮ ಸ್ವಂತ ಪಂಪ್‌ಸೆಟ್‌ಗಳಿಂದ ನೀರಾವರಿಗೆ ನೀರನ್ನು ಬಳಸುವ ಸಲುವಾಗಿ ನೀರನ್ನು ಸಂಗ್ರಹಿಸಲಾಗಿದೆ. |
| **ಬಿ) ಸೊಂತಿ ಬ್ಯಾರೇಜು – ಏತ ನೀರಾವರಿ ಯೋಜನೆ** | ಈ ಯೋಜನೆಯಡಿ 4.00 ಟಿಎಂಸಿ ನೀರನ್ನು ಬಳಸಿ 16,000 ಹೆಕ್ಟೇರ್ ಭೂ ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗುವುದು. ಬ್ಯಾರೇಜಿನ ಸಿವಿಲ್ ಕಾಮಗಾರಿಗಳು ಮತ್ತು ಎಲ್ಲಾ 37 ನೇರ ಗೇಟ್‌ಗಳ ಸ್ಥಾಪಿಸುವ ಕಾರ್ಯ ಪೂರ್ಣಗೊಳಿಸಲಾಗಿದೆ ಮತ್ತು ಬ್ಯಾರೇಜ್‌ನಲ್ಲಿ ನೀರನ್ನು ಶೇಖರಿಸಲಾಗಿದೆ.<br><br>ಸದರಿ ಏತ ನೀರಾವರಿ ಯೋಜನೆಯ, ಟರ್ನ್ ಕೀ ಆಧಾರಿತ ಮುಖ್ಯ ಸ್ಥಾವರದ (ಬಾಕಿ ಉಳಿದ) ಕೆಲಸಗಳು ಬಹುತೇಕ ಪೂರ್ಣಗೊಂಡಿದ್ದು, ಪ್ರಾಯೋಗಾರ್ಥ ಚಾಲನೆ ಮಾಡಲಾಗಿದೆ. |

| | |
|---|---|
| **ನೀರಾವರಿ ಪ್ರದೇಶ: 16,100 ಹೆಕ್ಟೇರ್** | ಫೀಡರ್ ಕಾಲುವೆಯ ನಿರ್ಮಾಣದ ಕಾಮಗಾರಿ ಪೂರ್ಣಗೊಂಡಿವೆ. ಸೊಂತಿ ಏತ ನೀರಾವರಿ ಯೋಜನೆಯ (ಅಕ್ವಿಡಕ್ಟ್ ಸೇರಿದಂತೆ), ಮುಖ್ಯ ಕಾಲುವೆ ಕಿ.ಮೀ.0.00 ರಿಂದ 18.00 ರವರೆಗೆ, ಸೊಂತಿ ಶಾಖಾ ಕಾಲುವೆ ಕಿ.ಮೀ.0.00 ರಿಂದ 20.02, ವಿತರಣಾ ಕಾಲುವೆ ಸಂ.1 ಕಿ.ಮೀ.0.00 ರಿಂದ 15.00 ಮತ್ತು ಯರಗೋಳ ಸಣ್ಣ ಕಾಲುವೆಯ ಕಾಮಗಾರಿಗಳು ಪ್ರಗತಿ ಮುನ್ನಡೆ ಹಂತದಲ್ಲಿದೆ.<br><br>**8,194 ಹೆಕ್ಟೇರ್** |
| **5. ಮಂಜ್ರಾ ನದಿಯ ಮೇಲಿನ ಬ್ಯಾರೇಜು –**<br><br>ಅ. ಜೀರಿಗಿಹಾಳ್ ಬ್ಯಾರೇಜು<br>ಆ. ಮಾಣೀಕೇಶ್ವರ್ ಬ್ಯಾರೇಜು<br>ಇ. ಚೆಂದಾಪುರ್ ಬ್ಯಾರೇಜು<br>ಈ. ಹಾಲ್‌ಹಳ್ಳಿ ಬ್ಯಾರೇಜು | ಈ ಯೋಜನೆಯು ಗೋದಾವರಿ ಕಣಿವೆಯಲ್ಲಿ ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ಈ 4 ಬ್ಯಾರೇಜುಗಳನ್ನು ಕಟ್ಟಿ 4.80 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳುವುದಾಗಿದೆ.<br><br>ಈ ಎಲ್ಲಾ 4 ಸೇತುವೆ ಬ್ಯಾರೇಜುಗಳ ಅಂದರೆ ಜೀರಿಗಿಹಾಳ್, ಮಾಣಿಕೇಶ್ವರ್, ಹಾಲ್‌ಹಳ್ಳಿ ಮತ್ತು ಚೆಂದಾಪುರ ಸೇತುವೆ ಬ್ಯಾರೇಜುಗಳ ಕಾಮಗಾರಿಗಳು ಪೂರ್ಣಗೊಂಡಿವೆ.<br><br>ರೈತರು ತಮ್ಮ ಸ್ವಂತ ಪಂಪ್‌ಸೆಟ್‌ಗಳಿಂದ ನೀರಾವರಿಗಾಗಿ ಬಳಸುವ ಸಲುವಾಗಿ ನೀರನ್ನು ಸಂಗ್ರಹಿಸಲಾಗಿದೆ. ಲೋ ಲೆವೆಲ್ ಫ್ರೀಕ್ಷನ್ ಡ್ಯಾಂಪರ್‌ಗಳ ಅಳವಡಿಕೆ ಕೈಗೆತ್ತಿಕೊಳ್ಳಬೇಕಾಗಿದೆ. |
| **6. ಕೃಷ್ಣಾ ನದಿಯ ಮೇಲಿನ ಬ್ಯಾರೇಜುಗಳು**<br>**ಗೂಗಲ್ ಬ್ಯಾರೇಜು** | ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ, ಕೃಷ್ಣಾ ನದಿಗೆ ಅಡ್ಡಲಾಗಿ ಗೂಗಲ್ ಸೇತುವೆಯ ಕೆಲಸಗಳು ಪೂರ್ಣಗೊಂಡಿದೆ. ಬ್ಯಾರೇಜಿನಲ್ಲಿ ಸಂಗ್ರಹಿಸಲಾದ ನೀರನ್ನು ರೈತರು ತಮ್ಮ ಸ್ವಂತ ಪಂಪ್‌ಸೆಟ್‌ಗಳಿಂದ ನೀರಾವರಿಗಾಗಿ ಬಳಸಿಕೊಳ್ಳುತ್ತಿದ್ದಾರೆ. |
| **7. ನಾ.ಬ.ದಂ.ಕಾ ವಿತರಣಾ ಕಾ. ಸಂ.9 ಎ**<br><br>**ಎ) ನಾ.ಬ.ದಂ.ಕಾ ವಿತರಣಾ ಕಾ. ಸಂ.9ಎ ನಿರ್ಮಾಣ:**<br><br>1) ಪ್ಯಾಕೇಜ್–1,2,3 ಮತ್ತು 4 (ಕಿ.ಮೀ.0.00 ಯಿಂದ 29.15ರವರೆಗೆ ಅಕ್ವಿಡಕ್ಟ್ ಸೇರಿದಂತೆ ಕಿ.ಮಿ. 8.18 ರಿಂದ 10.48ರವರೆಗೆ)<br><br>**ಬಿ) ಅರಕೇರಾ ಶಾಖಾ ಕಾಲುವೆಯ ನಿರ್ಮಾಣ:**<br>ಕಿ.ಮೀ.0.00 ರಿಂದ 22.87 (ಪ್ಯಾಕೇಜು–1,2 ಮತ್ತು 3)<br><br>**ಸಿ) ವಡವಟ್ಟಿ ಶಾಖಾ ಕಾಲುವೆಯ ನಿರ್ಮಾಣ:**<br>1) ಪ್ಯಾಕೇಜ್–1 (ಕಿ.ಮೀ.0.00 ರಿಂದ 10.00 ರವರೆಗೆ)<br><br>2) ಪ್ಯಾಕೇಜ್–2, 3 ಮತ್ತು 4 (ಕಿ.ಮೀ.10.00 ರಿಂದ 28.37 ರವರೆಗೆ)<br><br>**ನೀರಾವರಿ ಪ್ರದೇಶ: 15,250 ಹೆಕ್ಟೇರ್** | ಈ ಯೋಜನೆಯು ರಾಯಚೂರು ಜಿಲ್ಲೆಯ ದೇವದುರ್ಗ ಮತ್ತು ಮಾನ್ವಿ ತಾಲ್ಲೂಕುಗಳ 15,250 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವುದಾಗಿದೆ.<br><br>– ಪ್ಯಾಕೇಜಿನ ಕೆಲಸಗಳು ಪೂರ್ಣಗೊಂಡಿವೆ ಮತ್ತು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.<br><br>– ವಹಿಸಲಾದ 3 ಪ್ಯಾಕೇಜ್‌ಗಳ (ಅಕ್ವಿಡಕ್ಟ್ ಸೇರಿದಂತೆ) ಕೆಲಸಗಳು ಪೂರ್ಣಗೊಂಡಿವೆ ಮತ್ತು ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.<br><br>– ಪ್ಯಾಕೇಜ್ ಕೆಲಸಗಳು ಬಹುತೇಕ ಪೂರ್ಣಗೊಂಡಿವೆ.<br><br>– ಪ್ಯಾಕೇಜ್ ಕೆಲಸಗಳು ಪ್ರಗತಿಯಲ್ಲಿವೆ.<br><br>**10,298 ಹೆಕ್ಟೇರ್** |

| |
|---|
| * ಸೂಚನೆ: ಈ ಮೇಲೆ ಹೇಳಿದ ಕಾಮಗಾರಿಗಳಲ್ಲಿ ಈಗಾಗಲೇ ಪೂರ್ಣಗೊಂಡ ಕಾಮಗಾರಿಗಳು ಒಳಗೊಂಡಿರುವುದಿಲ್ಲ. |
| 30.09.2017 ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ ಸ್ವೀಕರಿಸಲಾದ/ಇತ್ಯರ್ಥವಾದ/ಬಾಕಿ ಉಳಿದ ಹೂಡಿಕೆದಾರರ ಕುಂದುಕೊರತೆಗಳ ವಿವರ (ನಮ್ಮ ಎಲ್ಲಾ ನೋಂದಣಿ ಹಾಗೂ ವರ್ಗಾವಣೆ ಏಜೆಂಟರ ವರದಿಯಂತೆ ಮತ್ತು ಕಂಪನಿಯಲ್ಲಿ ಲಭ್ಯವಿರುವ ಮಾಹಿತಿ) |

| 30.06.2017 ರಲ್ಲಿದ್ದಂತೆ ಬಾಕಿ | ತ್ರೈಮಾಸಿಕದಲ್ಲಿ ಸ್ವೀಕೃತಿ 01.07.2017 ರಿಂದ 30.09.2017 | ಒಟ್ಟು | ತ್ರೈಮಾಸಿಕದಲ್ಲಿ ಇತ್ಯರ್ಥವಾದವು | ತ್ರೈಮಾಸಿಕದ ಅಂತ್ಯದಲ್ಲಿ (30.09.2017) ಇತ್ಯರ್ಥವಾಗದೇ ಉಳಿದವು |
|---|---|---|---|---|
| ಇಲ್ಲ | ಇಲ್ಲ | ಇಲ್ಲ | ಇಲ್ಲ | ಇಲ್ಲ |

ಟಿಪ್ಪಣಿ: 1) ಯೋಜನಾ ಕಾರ್ಯಪ್ರಗತಿಯು ತೃಪ್ತಿಕರವಾಗಿದೆ.

2) ಹೂಡಿಕೆದಾರರ ಕುಂದುಕೊರತೆಗಳನ್ನು ಕಂಪನಿ ಆಂತರಿಕವಾಗಿ ಹಾಗೂ ಕಂಪನಿ ನೇಮಿತ ನೋಂದಣಿ ಹಾಗೂ ವರ್ಗಾವಣೆ ಏಜೆಂಟರುಗಳು ಸ್ಪಂದಿಸುವರು.

ದಿನಾಂಕ : 17.10.2017
ಸ್ಥಳ : ಬೆಂಗಳೂರು

ಸಹಿ/-
ವ್ಯವಸ್ಥಾಪಕ ನಿರ್ದೇಶಕರು